ಒ.ಎಸ್.ಸಂಖ್ಯೆ:**4 /2025** ಪಿ .ಡಬ್ಲ್ಯೂ:**1** ಪುಟ: **4**
ಸಾಕ್ಷಿಯನ್ನು ದಿಃ **11.09.2025** ರಂದು ಕರೆಸಿ ಪ್ರಮಾಣೀಕರಿಸಲಾಯಿತು.
**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಎಂ ಅರ್ ವಕೀಲರಿಂದಃ-**

ನನ್ನ ತಾತನ ಹೆಸರು ಮುನಿಯಪ್ಪ. ಮುನಿಯಪ್ಪನ ತಂದೆಯ ಹೆಸರು ನಲ್ಲನಬೋವಿ ಎಂದರೆ ಸರಿ. ಸದರಿ ಮುನಿಯಪ್ಪ ರವರಿಗೆ ಒಟ್ಟು 4 ಜನ ಮಕ್ಕಳು. ಅ ಪೈಕಿ ನನ್ನ ತಾಯಿ ವೆಂಕಟರತ್ನಮ್ಮ ಮತ್ತು ಪ್ರತಿವಾದಿ ಸುರೇಶ್ ರವರು ಸೇರಿರುತ್ತಾರೆ. ಉಳಿದ ಇಬ್ಬರ ಹೆಸರು ಯಶೋದಮ್ಮ ಮತ್ತು ಗೋವಿಂದಮ್ಮ. ನಾನು ಈ ಕೇಸಿನ ಪ್ರತಿವಾದಿಯನ್ನು ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವಾ ಸ್ವತ್ತು ನಲ್ಲನಬೋವಿ ರವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಮುನಿಯಪ್ಪನಿಗೆ ಸದರಿ ದಾವಾ ಸ್ವತ್ತು ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಮುನಿಯಪ್ಪ ಸ್ವತಃ ಸಂಪಾದನೆ ಮಾಡಿದ್ದರು ಎಂಬುದಾಗಿ ತೋರಿಸಲು ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 2008 ನೇ ಇಸವಿಯಲ್ಲಿ ಸದರಿ ಮುನೆಪ್ಪ ತೀರಿಕೊಂಡಿರುತ್ತಾರೆ.ಸದರಿ ಮುನೆಪ್ಪ ಬದುಕಿದ್ದ ಕಾಲಕ್ಕೆ ಮುನೆಪ್ಪ ಮತ್ತು ಪ್ರತಿವಾದಿ ಇಬ್ಬರು ಒಟ್ಟಿಗೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತು ಕುರಿತಂತೆ ಸದರಿ ಮುನೇಪ್ಪ ನಿಗೆ ಮರಣಶಾಸನ ಮಾಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮುನೆಪ್ಪ ಬದುಕಿದ್ದ ಕಾಲಕ್ಕೆ ಯಾವುದೇ ವಿಭಾಗ ಅಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಮುನೇಪ್ಪ ತನ್ನ ಹೆಣ್ಣು ಮಕ್ಕಳಿಗೆ 1 ಎಕರೆ ಜಮೀನು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಆದರೆ ಈ ಬಗ್ಗೆ ನನ್ನ ದಾವಾದಲ್ಲಿ ಅಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿ. ಸದರಿ ಮುನೇಪ್ಪ ನಿಗೆ ದಾವಾ ಸ್ವತ್ತಿನಲ್ಲಿ 5 ನೇ 1 ಭಾಗದ ಹಕ್ಕು ಮಾತ್ರ ಇತ್ತು ಎಂದರೆ ನಗನೆ ಗೊತ್ತಿಲ್ಲ.

ಕಳೆದ 15 ವರ್ಷಗಳಿಂದ ನನ್ನ ಮತ್ತು ಪ್ರತಿವಾದಿಯ ನಡುವೆ ಬಂಗಾರಪೇಟೆ ನ್ಯಾಯಾಲಯದಲ್ಲಿ ಕೇಸುಗಳು ನಡೆಯುತ್ತಾ ಇವೆ. ನಿಪಿ.1 ವಿಲ್ ನ್ನು ನೊಂದಾಯಿಸುವ ಕಾಲಕ್ಕೆ ನಾನು ಸಹ ಬಂಗಾರಪೇಟೆ ತಾಲ್ಲೂಕು ಕಚೇರಿಯ ಆವರಣದಲ್ಲಿ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೆನು.ಸದರಿ ಮುನೇಪ್ಪನಿಗೆ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ನನಗೆ ವಿಧ್ಯಾಭ್ಯಾಸ ಇರುವುದಿಲ್ಲ. ನಿಪಿ.1 ರ ವಿಷಯಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಎಂದರೆ ಸುಳ್ಳು. ಮುನೇಪ್ಪನಿಗೆ ವಯಸ್ಸಾಗಿದ್ದನ್ನು ದುರುಪಯೋಗ ಪಡಿಸಿಕೊಂಡು ನಿಪಿ.1 ವಿಲ್ ನ್ನು ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುನೇಪ್ಪನಿಗೆ ನಿಪಿ.1 ಮರಣಶಾಸನ ಪತ್ರವನ್ನು ಬರೆಯುವ ಉದ್ದೇಶ ಇರಲಿಲ್ಲ ಹಾಗೂ ಅತನಿಗೆ ದಾವಾ ಸ್ವತ್ತಿನ ಮೇಲೆ ಸಂಪೂರ್ಣ ಹಕ್ಕು ಸಹ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 2 ಸ್ವತ್ತಿನಲ್ಲಿ ಪ್ರತಿವಾದಿ ವಾಸ ಇದ್ದಾನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಸ್ವತ್ತನ್ನು ಪ್ರತಿವಾದಿಯೇ ಉಳುಮೆ ಮಾಡುತ್ತಿದ್ದಾನೆ

ಎಂದರೆ ಸರಿ. ಪ್ರತಿವಾದಿಯು ಜಂಟಿ ಕುಟುಂಬದ ಸದಸ್ಯನಾಗಿರುವುದರಿಂದ ದಾವಾ 1 ನೇ ಐಟಂ ಸ್ವತ್ತನ್ನು ಅತನೇ ಉಳುಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ ಕೆ.ಜಿ.ಎಫ್(ಪೀಠ)